(ಊ) ಕೇಂದ್ರ ಸರ್ಕಾರದವರು ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಪಾಲಿಸಿ ಮಾಡಿರುವುದರ ಕುರಿತು

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದಲ್ಲಿ 31ನೇ ತಾರೀಖು ಎಗ್ಜಿಮ್ ಪಾಲಿಸಿ ಸುಮಾರು 824 ಪದಾರ್ಥಗಳನ್ನು ಕೈಗಾರಿಕೆಯಿಂದ ಉತ್ಪಾದನೆ ಮಾಡತಕ್ಕಂಥವು ಕೃಷಿ ಉತ್ಪಾದನೆಯಿಂದ ಮಾಡತಕ್ಕಂಥವು, ಆಮದು ಮತ್ತು ರಫ್ತು ನೀತಿಯ ಮೂಲಕ W.T.O ಗೆ ಏನು ಸಹಿ ಮಾಡಿತ್ತು ಅದು ಮಾನ್ಯ ನರಸಿಂಹರಾವ್ ಅವರ ಕಾಲದಲ್ಲಿ ಆದಂತಹ ಗ್ಯಾಟ್ ಒಪ್ಪಂದ ಆಮೇಲೆ ಮಾನ್ಯ ದೇವೇಗೌಡರು ಅದನ್ನೇ ಮುಂದುವರಿಸಿದರು. ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ "ದೇಶ ಬಚಾವೋ ವಿದೇಶಿ ಹಠಾವೋ" ಎಂದು ಆಂದೋಲನ ಮಾಡಿದರು. ಇವತ್ತು ರೈತರು ಏನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಆ ಆತ್ಮಹತ್ಯೆಗೂ ಈ ಆಮದು ನೀತಿಗೂ ಬಹಳ ಸಂಬಂಧ ಇದೆ. ಮಾನ್ಯ ಅಧ್ಯಕ್ಷರೇ, ಇನ್ನು ಮುಂದೆ ರೈತರು ಬದುಕುವ ಪ್ರಶ್ನೆಯೇ ಇಲ್ಲ. ಒ.ಜಿ.ಎಲ್. ಎಂದು ಮಾಡಿಕೊಂಡಿರುವವರು ನಾವು. ವಿಶ್ವ ವಾಣಿಜ್ಯ ಮುಕ್ತ ಮಾರುಕಟ್ಟೆ ಪರವಾನಿಗೆ ವ್ಯವಸ್ಥೆ ಅದರ ಉದ್ದೇಶ ಏನೆಂದರೆ ನಮ್ಮ ದೇಶದಲ್ಲಿ ಹೆಚ್ಚು ಉತ್ಪಾದನೆಯಾದಾಗ ಹೊರಗಡೆ ಕಳುಹಿಸುವುದಕ್ಕೋಸ್ಕರ ಫ್ಲಡ್‌ಗೇಟ್ ಓಪನ್ ಮಾಡಿಬಿಟ್ಟರು. ನಮ್ಮ ದೇಶದಲ್ಲಿ ಯಾವುದಾದರೂ ಆಹಾರಪದಾರ್ಥ ಇಲ್ಲದೇ ಇದ್ದರೆ ಹೊರದೇಶದಿಂದ ತರಿಸಿಕೊಳ್ಳುವುದಕ್ಕೆ ಗೇಟ್ ಓಪನ್ ಮಾಡಿದರು. ಈಗಾಗಲೇ ನಾವು ಇಷ್ಟೊಂದು ಆಹಾರಪದಾರ್ಥಗಳನ್ನು ಉತ್ಪಾದನೆ ಮಾಡಿ ಮೊನ್ನೆ ಸಚಿವರಾದ ಭೈರೇಗೌಡರು ಮಾತನಾಡುತ್ತಾ ತರಕಾರಿ ಬೆಳೆಗಳನ್ನು 4 ಪಟ್ಟು ಉತ್ಪಾದನೆ ಹೆಚ್ಚು ಮಾಡಿದ್ದೇವೆ ಆದ್ದರಿಂದ ನಾವು ಏನೂ ಮಾಡುವುದಕ್ಕೆ ಆಗದೇ ಇರತಕ್ಕಂಥ ಸ್ಥಿತಿಯಲ್ಲಿದ್ದೇವೆಂದು ಅವರ ಭಾಷಣಯಲ್ಲಿ ಹೇಳಿದರು. ಆದರೆ ಈಗ ಏನಾಗಿದೆ, ಹಾಲು. ಪ್ರಪಂಚಕ್ಕೆ ಹಾಲು ಉತ್ಪಾದನೆ ಮಾಡುವುದರಲ್ಲಿ ನಾವೇ ಮೊದಲಿಗರು. ಅದಕ್ಕೆ ಸಂಬಂಧಪಟ್ಟಂತಹ ಬೆಣ್ಣೆ, ತುಪ್ಪ ಎಲ್ಲವನ್ನೂ ತರಿಸಿಕೊಳ್ಳತಕ್ಕಂಥ ಒಂದು ನೀತಿ ಪ್ರಕಟಣೆ ಆಗಲಿ. ಆಮೇಲೆ ಟೊಮ್ಯಾಟೋ ಅದನ್ನು ಹೊರಗಡೆಯಿಂದ ತರಿಸಿ ಕೊಳ್ಳುವುದು. ಬೆರಕೆ ಸೊಪ್ಪು ಹೊರಗಡೆಯಿಂದ ತರಿಸಿಕೊಳ್ಳುವುದು. ಬೆಂಡೇಕಾಯಿಯನ್ನು ಹೊರಗಡೆಯಿಂದ ತರಿಸಿಕೊಳ್ಳುವುದು. ಬದನೇಕಾಯಿಯನ್ನು ಹೊರಗಡೆಯಿಂದ ತರಿಸಿಕೊಳ್ಳುವುದು. ಚಿಲಕರಿ ಸೊಪ್ಪು, ಚಕೋತಸೊಪ್ಪು,ಕೊತ್ತಂಬರಿ ಸೊಪ್ಪು ಎಲ್ಲಾ ಸೊಪ್ಪನ್ನು ಹೊರಗಡೆಯಿಂದ ತರಿಸಿಕೊಳ್ಳುವುದು. ರೈತರಿಗೆ ಇನ್ನು ಮೇಲೆ ಒಂದು ಕೆಲಸ ಮಾಡಿ. ಕೇಂದ್ರ ಸರ್ಕಾರಗಳು ಇಡೀ ಭೂಮಿಯನ್ನು ವಹಿಸಿಕೊಂಡು ಸಂಬಳ ಕೊಟ್ಟುಬಿಡಿ ನಾವು ಅದನ್ನು ಇಟ್ಟುಕೊಂಡಿರುತ್ತೇವೆ. ಇಡೀ W.T.O. ಉದ್ದೇಶ ಏನೆಂದರೆ ಇಡೀ ರೈತರ ಮಾರುಕಟ್ಟೆಯನ್ನು ನಾಶ ಮಾಡಿ ಕೃಷಿ ಕ್ಷೇತ್ರವನ್ನು ನಾಶ ಮಾಡಿ ಅವರ ಮಾರುಕಟ್ಟೆಗೆ ಅನುಕೂಲ ಮಾಡಿಕೊಳ್ಳತಕ್ಕಂಥ ಒಂದು ಮೋಸದ ತಂತ್ರದ ಮಾರುಕಟ್ಟೆ ವ್ಯವಸ್ಥೆ ಇರುವುದು. ಆದ್ದರಿಂದ ನಾವು ಈಗ W.T.O ಗೆ ಸಹಿ ಮಾಡಿದೆವು ಎಂದು ಹೇಳಿ ಈಗಾಗಲೇ ರೇಷ್ಮೆ ವಿಚಾರದಲ್ಲಿ ದೊಡ್ಡ ದೊಡ್ಡ ಹೋರಾಟ ನಡೆಯಿತು. ಈಗಾಗಲೇ 824 ಹಾಗೂ ಮೊದಲೇ 320 ಚಿಲ್ಲರೆ ಪದಾರ್ಥಗಳನ್ನು ವಿಶ್ವ ವಾಣಿಜ್ಯ ಮುಕ್ತ ಮಾರುಕಟ್ಟೆಗೆ ಪರವಾನಿಗೆ ಕೊಟ್ಟು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು 824 ವಸ್ತುಗಳ ಮೇಲೆ ಆಮದು ನೀತಿಯನ್ನು ಸರಳಗೊಳಿಸಿ ನಮ್ಮ

ದೇಶದಲ್ಲಿ ಯಾರು ಬೇಕಾದರೂ ಮಾರಾಟ ಮಾಡಬಹುದು. ಇದರಿಂದ ಕೈಗಾರಿಕೆ ಉಳಿದುಕೊಳ್ಳುವುದಕ್ಕೆ ಸಾಧ್ಯವೇ? ಕೃಷಿ ಉಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

6.50 ಪಿ. ಎಂ.

ಎಲ್ಲಾ ಸಬ್ಸಿಡಿಯನ್ನು ರದ್ದು ಮಾಡಿ ಇಲ್ಲದಿದ್ದರೆ ಸಾಲವನ್ನು ವಾಪಸ್ ಮಾಡಿ ಎಂಬ ಒಂದು ಕಾಲವು ಬರುತ್ತದೆ. ಗ್ಯಾಟ್ ಒಪ್ಪಂದದಿಂದ ಇಡೀ ದೇಶ ನಾಶವಾಗುತ್ತದೆ. ರೈತರು ನಾಶವಾಗುವಂಥ ಪರಿಸ್ಥಿತಿಯು ಬರುತ್ತದೆ. ರಾಜ್ಯ ಸರಕಾರದವರನ್ನು ಕೇಳಿದರೆ ಅವರು ಇದು ಕೇಂದ್ರ ಸರಕಾರದ ನೀತಿ ನಾವು ಏನು ಮಾಡುವುದಕ್ಕಾಗುವುದಿಲ್ಲ ಎಂಬ ಮಾತುಗಳನ್ನು ಹೇಳಬಾರದು. ಹಾಗಾದರೆ ಈ ಕುರಿತು ರಾಜ್ಯ ಸರಕಾರದ ಜವಾಬ್ದಾರಿ ಏನಿದೆ ಎಂಬ ಮಾತುಗಳನ್ನು ಹೇಳಬೇಕು. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಹೊಗೆಸೊಪ್ಪನ್ನು ಕೂಡ ಹೊರದೇಶಗಳಿಂದ ತರಿಸಿಕೊಳ್ಳುತ್ತಾ ಇದ್ದಾರೆ. ಈಗಾಗಲೇ ಹೊಗೆಸೊಪ್ಪು ಬೆಳೆಯುವ ರೈತರು ಪೂರ್ಣವಾಗಿ ನಾಶವಾಗಿ ಬಿಟ್ಟಿದ್ದಾರೆ. ಆಲೂಗಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ಮುಂತಾಗಿ ಎಲ್ಲಾ ಆಹಾರಪದಾರ್ಥಗಳನ್ನು ವಿದೇಶಗಳಿಂದ ತರಿಸಿಕೊಂಡು ಇಡೀ ಮಾರುಕಟ್ಟೆ ವ್ಯವಸ್ಥೆಯನ್ನು ನಾಶ ಮಾಡುವುದರ ಮೂಲಕ ರೈತರ ಕುಲವು ನಾಶವಾಗುತ್ತದೆ. ಈ ಬಗ್ಗೆ ರಾಜ್ಯ ಸರಕಾರದವರ ನಿಲುವು ಏನು ಎಂಬುದನ್ನು ತಾವುಗಳು ಹೇಳಬೇಕು. ಮೊನ್ನೆಯ ಒಂದು ಪ್ರಕಟಿತ ವಿಚಾರವನ್ನು ಹೇಳಬಯಸುತ್ತೇನೆ " ಮಾನ್ಸೆಂಟೋ ದಿಂದ ರೈತರ ಮೇಲೆ ದುಷ್ಪರಿಣಾಮ. ಇದು ರಾಜ್ಯಸರಕಾರದವರಿಗೆ ಅತ್ಯಂತ ಜವಾಬ್ದಾರಿ ಪೂರ್ವಕವಾಗಿರುವಂಥ ವಿಚಾರ. ಮಾನ್ಸೆಂಟೋ ಸಂಸ್ಥೆಯಿಂದ ಸ್ಥಳೀಯ ರೈತರುಗಳ ಮೇಲೆ ದುಷ್ಪರಿಣಾಮಗಳು ಆಗುವುದು ಖಚಿತವಾದುದರಿಂದ ಕೇಂದ್ರ ಸರಕಾರವು ದೇಶದಲ್ಲಿ ಈ ಸಂಸ್ಥೆಯು ಕಾಲೂರಲು ಅವಕಾಶ ನೀಡಬಾರದು. ಎಂದು ಸಮಿತಿಯ ಅಧ್ಯಕ್ಷ ವಾವ್‌ಮೋರ್‌ಹೌಸ್‌ರವರು ಇಂದು ಇಲ್ಲಿ ಪತ್ರಿಕೆಗಳಿಗೆ ಹೇಳಿದ್ದಾರೆ. ಅವರು ಮಾನ್‌ಸೆಂಟೋ ಸಂಸ್ಥೆ ಭಾರತಕ್ಕೆ ಎಲ್ಲಾ ದೃಷ್ಟಿಯಿಂದಲೂ ಮಾರಕ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸಂಬಂಧಿಸಿದ ಇಲಾಖೆಗಳ ಅನುಮತಿಯನ್ನು ಪಡೆಯದೆ ರಾಜ್ಯದ ಉತ್ತರ ಭಾಗಗಳಲ್ಲಿ ಕಾರ್ಯನಿರ್ವಹಿಸು ತ್ತಿರುವುದು ಮಾನ್ಸೆಂಟೋ ಹಲವು ಸಂಶಯಗಳಿಗೆ ದಾರಿ ಮಾಡಿಕೊಟ್ಟಿದೆ ಎಂದು ಅವರು ಹೇಳಿದರು. ಸಂಸ್ಥೆಯು ನಡೆಸುತ್ತಿರುವ ಕ್ಷೇತ್ರ ಪರೀಕ್ಷೆಗಳು ಅಮೆರಿಕಾವು ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ವ್ಯಾಪಕ ಟೀಕೆಗೆ ಗುರಿಯಾಗಿದೆ. ಈ ಸಂಸ್ಥೆಗೆ ವಿದೇಶದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಆದ್ದರಿಂದ, ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ಕೆ ಸಂಬಂಧಿಸಿದಂತೆ ಬಹುರಾಷ್ಟ್ರೀಯ ಸಂಸ್ಥೆಗಳ ಹಣ ಸಂಗ್ರಹಿಸಿದ್ದ ಉದ್ದೇಶವನ್ನು ವಿಶ್ವಸಂಸ್ಥೆಯು ಖಾಸಗೀಕರಣವಾಗತಕ್ಕಂಥ ಪರಿಸ್ಥಿತಿಗೆ ಬಂದಿದೆ ಎಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ರಾಜ್ಯ ಸರಕಾರವು ಮಾನ್ಸೆಂಟೋ ವಿಚಾರದಲ್ಲಿ ಬಹಳ ಗಂಭೀರವಾಗಿ ವಿಚಾರ ಮಾಡಬೇಕು. ಇದೊಂದು ವಿಶೇಷವಾದ ತಳಿ. ಒಂದು ಸಾರಿ ಉತ್ಪಾದನೆ ಮಾಡಿದರೆ ಎರಡನೇ ಸಾರಿ ಮೊಳಕೆಯನ್ನೇ ಒಡೆಯದಂಥ ಈ ಬೀಜ.

ಅಧ್ಯಕ್ಷರು : ತಾವುಗಳು ಹೇಳುವ ವಿಚಾರಗಳು ಅರ್ಥವಾಗಿವೆ. ಆದರೆ ರಾಜ್ಯ ಸರಕಾರದವರು ಏನು ಮಾಡಬೇಕೆಂಬುದನ್ನು ಕೂಡ ಹೇಳಿ.

ಶ್ರೀ ಕೆ. ಎಸ್. ಪುಟ್ಟಣಯ್ಯ : ಮಾನ್ಸೆಂಟೋ ಸಂಸ್ಥೆಯವರನ್ನು ಯಾವುದೇ ಕಾರಣಕ್ಕೂ ರಾಜ್ಯದ ಒಳಗಡೆ ಬರಲು ಬಿಡಬಾರದು. ಅವರನ್ನು ಒದ್ದೋಡಿಸಬೇಕು. ಕೇಂದ್ರ ಸರಕಾರದವರ ಈ ನೀತಿಯ ವಿರುದ್ಧ ರಾಜ್ಯ ಸರಕಾರದವರ ನಿಲುವು ಏನು ಎಂಬುದನ್ನು ತಾವುಗಳು ಹೇಳಬೇಕು. ಇದು ಬಹಳ ಗಂಭೀರವಾದ ವಿಷಯ. ಇನ್ನು ಮೇಲೆ ರೈತರು ಖಾಯಂ ಆಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುತ್ತಾರೆ. ನೀವು ಪರಿಹಾರಕೊಡಲು ಹಣ ತಯಾರಿಡಬೇಕಾಗುತ್ತದೆ. ಆ ಹಣದಿಂದ ಶವಸಂಸ್ಕಾರ ಮಾಡಬೇಕಾಗುತ್ತದೆ. ರೈತರ ಸಮಾಧಿಯ ಮೇಲೆ ಕೇಂದ್ರ ಸರಕಾರದವರು ಮತ್ತು ರಾಜ್ಯ ಸರಕಾರದವರು ಸವಾರಿ ಮಾಡಿದರೆ, ದೇಶದಲ್ಲಿ ಯಾರಿಗೂ ಉಳಿಗಾಲವಿರಲಾರದು. ಇದನ್ನು ಅತ್ಯಂತ ಗಂಭೀರವಾಗಿ ಚಿಂತನೆ ಮಾಡಬೇಕು. ರಾಜ್ಯ ಸರಕಾರದವರ ನಿಲುವು ಈ ಬಗ್ಗೆ ಏನು ಎಂಬುದು ಆಗಬೇಕು. ಕೇಂದ್ರ ಸರಕಾರದ ಈ ನಿಲುವಿನ ವಿರುದ್ಧ ದೊಡ್ಡ ಚಳವಳಿ ಆಗಬೇಕು.

+ ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಪುಟ್ಟಣ್ಣಯ್ಯನವರು ಬಹಳ ಸಮರ್ಥವಾಗಿ ವಿಚಾರಗಳನ್ನು ಮಂಡಿಸಿದ್ದಾರೆ. ಮೊನ್ನೆ 30ನೇ ತಾರೀಖು ಘೋಷಣೆ ಮಾಡಿದಂಥ ಎಕ್ಸ್‌ಪರ್ಟ್ ಇಂಪೋರ್ಟ್ ಪಾಲಿಸಿ ಮೇಲೆ ಸಾಕಷ್ಟು ಬೆಳಕನ್ನು ಅವರು ಚೆಲ್ಲಿದ್ದಾರೆ ಸುಮಾರು 894 ಐಟಂಸ್‌ನ್ನು ಫ್ರೀಯಾಗಿ ಇಂಪೋರ್ಟ್ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಯಾವ ರಿಸ್ಟ್ರಿಕ್ಷನ್ಸ್ ಇಲ್ಲದೆ ಮುಕ್ತವಾಗಿ ಅದನ್ನು ಇಂಪೋರ್ಟ್ ಮಾಡಬಹುದು. ಹಾಗೆಯೇ 414 ವಸ್ತುಗಳ ಮೇಲೆ ರಿಸ್ಟ್ರಿಕ್ಟೆಡ್ ಅಂದರೆ ಲೈಸನ್ಸ್‌ಗಳನ್ನು ತೆಗೆದುಕೊಂಡು ಕಳುಹಿಸತಕ್ಕಂಥಾದ್ದು ರಿಸ್ಟ್ರಿಕ್ಟೆಡ್ ಪಾಲಿಸಿಯನ್ನು ಇಟ್ಟು ಅದನ್ನು ಮಾಡಿದ್ದಾರೆ. ಈಗಾಗಲೇ ಅವರು ಪಟ್ಟಿಯಲ್ಲಿ ಹೇಳಿದ ಹಾಗೆ ಮತ್ತು ಪತ್ರಿಕೆಗಳಲ್ಲಿಯೂ ನೋಡಿದ ಹಾಗೆ, ಸ್ಪಷ್ಟವಾಗಿ ಬಂದಿದೆ. ಎಕಾನಮಿಕ್‌ಟೈಂಸ್ ಪತ್ರಿಕೆಯಲ್ಲಿ ಐಟಂವೈಸ್ ವಿವರಗಳನ್ನು ಕೂಡ ನಾವು ನೋಡಿದ್ದೇವೆ. ಅವರು ಹೇಳಿದಹಾಗೆ ಹುಣಸೇಕಾಯಿ, ಹುರುಳಿಕಾಯಿ, ಮುಂತಾಗಿ ಪ್ರತಿಯೊಂದು ಕೂಡ ಯಾರಿಗೇ, ಎಲ್ಲಿಯಾದರೂ ಚೀಪ್ ಆಗಿ ಸಿಕ್ಕಿದರೆ, ಅದನ್ನು ನೇರವಾಗಿ ಇಂಪೋರ್ಟ್ ಮಾಡತಕ್ಕಂಥ ಒಂದು ಪಾಲಿಸಿಯನ್ನು ಕೇಂದ್ರ ಸರಕಾರದವರು ಮಾಡಿದ್ದಾರೆ. ಅದಕ್ಕೆ ಹಿಂದಿನ ಸರಕಾರಗಳಾದ ನರಸಿಂಹರಾವ್ ಸರಕಾರವಾಗಲೀ, ಗುಜ್ರಾಲ್ ಸರಕಾರವಾಗಲೀ, ದೇವೇಗೌಡರ ಸರಕಾರವಾಗಲೀ ಮತ್ತು ಈಗ ಇರತಕ್ಕಂಥ ಸರಕಾರವೇ ಆಗಲಿ, ಇವರು ಗ್ಯಾಟ್ ಒಪ್ಪಂದಕ್ಕೆ ಮನ್ನಣೆಯನ್ನು ಕೊಟ್ಟ ಮೇಲೆ ಈ ಒಂದು ನೀತಿಯನ್ನು ತಂದಿದ್ದಾರೆ ಎಂಬ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದು ನಿಜ ಅದನ್ನು ಮುಚ್ಚಿಡುವುದಕ್ಕಾಗುವುದಿಲ್ಲ. ಅಂತೆಯೇ ಒಬ್ಬರಮೇಲೊಬ್ಬರು ಹೇಳುತ್ತಾ ಕುಳಿತುಕೊಳ್ಳಲು ಆಗುವುದಿಲ್ಲ. ಆದರೆ ಇದರ ಮೂಲಕ ನಮ್ಮ ರೈತರ ಮೇಲೆ ಯಾವ ರೀತಿಯ ಪರಿಸ್ಥಿತಿ ಮತ್ತುಪರಿಣಾಮ ಆಗುತ್ತದೆ ಎಂಬುದನ್ನು ಚಿಂತನೆ ಮಾಡಬೇಕಾಗುತ್ತದೆ. ಇವೊತ್ತು ರೈತರನ್ನು ನಮ್ಮ ಸಮಾಜದ ಬೆನ್ನೆಲುಬು ಎಂದು ಹೇಳಿಕೊಳ್ಳುತ್ತೇವೆ. ಇಂದು ಅವರು ಸರ್ವನಾಶವಾಗುವುದನ್ನು ನಾವೆಲ್ಲರೂ ತಟಸ್ಥರಾಗಿ ನೋಡುತ್ತಿರಬೇಕೆ ? ಅದರ ಬಗ್ಗೆ ರಾಜ್ಯ ಸರಕಾರದವರು ಈ ನೀತಿಯ ವಿರುದ್ಧ ತಮ್ಮದೇ ಆದಂಥ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆಯೇ ? ತಾವುಗಳು ಪ್ರಧಾನಿಯವರನ್ನು ಮತ್ತು ಕಾಮರ್ಸ್ ಮಿನಿಸ್ಟರ್‌ರವರನ್ನು ಈ ಕುರಿತು ಭೇಟಿಯಾಗಿ ಚರ್ಚೆ ಮಾಡಿದ್ದೀರಾ? ಇದರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ನೀವು ಅವರಿಗೆ

ಕೊಟ್ಟಿರುವಿರಾ ? ಇದರ ಆಗುಹೋಗುಗಳ ಬಗ್ಗೆ ಅವರಲ್ಲಿ ನೀವು ವಿವರವಾದ ಪ್ರಸ್ತಾಪವನ್ನು ಮಾಡಿದ್ದೀರಾ? ಅದನ್ನು ನೀವು ಇಲ್ಲಿ ಸ್ಪಷ್ಟಪಡಿಸಿಬೇಕಾಗುತ್ತದೆ. ಇಲ್ಲವಾದರೆ ಸದನದಲ್ಲಿ ಒಂದು ನಿರ್ಣಯವನ್ನು ಮಾಡಿ ಅದರ ಮೂಲಕ ಕೇಂದ್ರ ಸರಕಾರಕ್ಕೆ ಒತ್ತಾಯ ತರತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇದರಲ್ಲಿ ನಾವು ಚೌಕಾಸಿ ಮಾಡಿಕೊಂಡು ಕುಳಿತುಕೊಳ್ಳತಕ್ಕಂಥಾದ್ದು ಸರಿಯಲ್ಲ. ಇವೊತ್ತು ನಾವು ಪ್ರತಿಯೊಂದು ಅಗ್ರಿಕಲ್ಚರಲ್ ಐಟಂಗಳನ್ನು ಇಂಪೋರ್ಟ್ ಮಾಡಿಕೊಳ್ಳುತ್ತೇವೆ ಅಂದರೆ, ರೈತರ ಸ್ಥಿತಿ ಏನಾದೀತು? ಮೊದಲೇ ಇಲ್ಲಿ ರೈತರು ಬೆಳೆಯತಕ್ಕಂಥಾದ್ದಕ್ಕೆ ಮಾರುಕಟ್ಟೆಯಿಲ್ಲ ನಮ್ಮ ಕೃಷಿ ಉತ್ಪಾದನೆ ಬಗ್ಗೆ ನಾವು ಗಮನಕೊಟ್ಟು ನೋಡಬೇಕು. ಇತ್ತೀಚೆಗೆ ಈರುಳ್ಳಿ ಅಭಾವವು ಇಡೀ ದೇಶವನ್ನು ಅಲುಗಾಡಿಸಿ ಬಿಟ್ಟುದನ್ನು ತಾವುಗಳು ಅರಿತಿದ್ದೀರಿ. ಅದು ಸರಿಯೋ ಕೆಟ್ಟದ್ದೋ ಎಂಬ ಮಾತುಗಳು ಬೇರೆ. ಇಂಥ ಒಂದು ಇಶ್ಯೂವನ್ನು ಆತ್ಮೀಯವಾಗಿ ತೆಗೆದುಕೊಂಡು ದೇಶದ ರಾಜಕೀಯವನ್ನು ಬದಲಾವಣೆ ಮಾಡುತ್ತಾರೆ ಎಂದಾಗ ನೀವು ಪರಿಸ್ಥಿತಿಯನ್ನು ಗಮನಕೊಟ್ಟು ನೋಡಬೇಕಾಗುತ್ತದೆ. ಇಂಥ ಒಂದು ಪರಿಸ್ಥಿತಿಯು ಇರುವಾಗ ಸುಮಾರು 894 ಐಟಂಗಳನ್ನು ಅವರು ಫಿಕ್ಸ್ ಮಾಡಿದ್ದಾರೆ. ಅದರಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಸುಮಾರು 814 ಐಟಂಗಳು ಇವೆ. ಆದ್ದರಿಂದ ಇದನ್ನು ಲಕ್ಷಿಸಿ ನಾವು ಒಂದು ನೀತಿ ನಿಯಮಗಳನ್ನು ನಿರೂಪಣೆ ಮಾಡಬೇಕು. ಇಲ್ಲವಾದರೆ ನಮ್ಮ ರೈತರುಗಳು ಸಂಪೂರ್ಣವಾಗಿ ಹಾಳಾಗಿ ಹೋಗುತ್ತಾರೆ. ಹಾಗೆಯೇ ಅದೇ ಸಮಯದಲ್ಲಿ ನಮ್ಮ ಕನ್ಸೂಮರ್ಸ್ ಅವರು ಅಗ್ರಿಕಲ್ಚರಲ್ ಲೇಬರರ್ ಇರಬಹುದು, ಪಟ್ಟಣದಲ್ಲಿರತಕ್ಕಂಥ ಜನಸಾಮಾನ್ಯರಿಗೂ ಕೂಡ ತಾಪತ್ರಯವಾಗುತ್ತದೆ. ಹೀಗೆಲ್ಲಾ ಇರುವಾಗ ಮಾನ್ಯ ರಾಮಕೃಷ್ಣ ಹೆಗಡೆಯವರು ಯಾವ ದೃಷ್ಟಿಯಿಂದ ತರಾತುರಿಯಲ್ಲಿ ಈ ಒಂದು ಎಗ್ರಿಮ್ ಪಾಲಿಸಿಯನ್ನು ಅಸೌನ್ಸ್ ಮಾಡಿ, ಅದರಲ್ಲಿ ಇಷ್ಟೊಂದು ಐಟಂಗಳನ್ನು ಏಕೆ ಸೇರಿಸಿದ್ದಾರೋ ಎಂಬುದು ಗೊತ್ತಿಲ್ಲ. ಏಕೆಂದು ಕೇಳಿದರೆ ನಾವು ಗ್ಯಾಟ್ ಒಪ್ಪಂದದ ಪ್ರಕಾರ ನಾವು ಮಾಡಬೇಕಾಗಿತ್ತು ಎಂಬ ಕಾರಣ ತೋರಿಸಿ ಮಾಡಿದ್ದೇವೆ ಎಂದು ಹೇಳಬಹುದು. ನಾನೇನು ಮಾಡಲಿ? ಎಂದು ಕೂಡ ಅವರು ಹೇಳಬಹುದು. ಆದರೆ ಯಾವುದೇ ಒಂದು ಪಾಲಿಸಿಯಿಂದ ನಮಗೆ ತೊಂದರೆ ಆದರೆ, ನಮ್ಮ ರೈತರಿಗೆ ತೊಂದರೆಯಾದರೆ, ಅದರಲ್ಲಿಯೂ ವಿಶೇಷವಾಗಿ ರೈತರುಗಳ ಆರ್ಥಿಕ ವಿಚಾರಕ್ಕೆ ತೊಂದರೆಯಾ ಗುತ್ತದೆ. ಏಕೆಂದರೆ ಹುಣಸೆಕಾಯಿ, ಮೆಣಸಿನಕಾಯಿ, ಕಾಯಿಪಲ್ಯಗಳು ಕೂಡ ಇಂಪೋರ್ಟ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತೇವೆ ಅಂದರೆ ನಾಳೆ ದೊಡ್ಡ ದೊಡ್ಡ ರಾಷ್ಟ್ರಗಳು ತಮ್ಮದೇ ಆದ ಒಂದು ಬೆಲೆಯನ್ನು ನಿಗದಿ ಮಾಡಿ ಅಲ್ಲಿ ಯಾರು ಮನುಷ್ಯರು ತಿನ್ನುವುದಿಲ್ಲವೋ, ದನಗಳು ತಿನ್ನುವುದಿಲ್ಲವೋ ಅದನ್ನು ನೀವು ತೆಗೆದುಕೊಂಡು ತಿನ್ನಿ ಎಂದು ಹೇಳುವ ಸ್ಥಿತಿ ಬರಬಹುದು. ಅದನ್ನು ಅವರು ಒತ್ತಾಯದ ಮೇಲೆ ಕೂಡ ಮಾಡುವ ಸಂದರ್ಭ ಬರಬಹುದು. ದೊಡ್ಡ ದೊಡ್ಡ ರಾಷ್ಟ್ರಗಳು ತಮ್ಮಲ್ಲಿರುವ ಪದಾರ್ಥಗಳನ್ನು ಪ್ರಪಂಚದ ಎಲ್ಲಾ ಭಾಗಗಳಿಗೆ ಸರಬರಾಜು ಮಾಡಲು ಸೂಕ್ತ ತಯಾರಿ ಮಾಡಿಕೊಂಡಿದ್ದಾರೆ. ಏಕೆಂದರೆ ಅವರ ಹತ್ತಿರ ಶಸ್ತ್ರ ಬಲ ಇದೆ. ಪ್ರಪಂಚದಲ್ಲಿ ಇವೊತ್ತು ತಮ್ಮ ಶಸ್ತ್ರ ಬಲದಿಂದ ಎಕಾನಮಿ ಮಾರ್ಕೆಟನ್ನು ಕ್ಯಾಪ್ಚರ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಪರೋಕ್ಷವಾಗಿ ಕೊಡುತ್ತಾ ಇದ್ದಾರೆ. ರಷ್ಯಾ ಕೊಲ್ಯಾಪ್ಸ್ ಆದಮೇಲೆ ಇವೊತ್ತು ಏನೂ ಉಳಿದಿಲ್ಲ. ಫ್ರೀ ಮಾರ್ಕೆಟ್ ಲಿಬರ್‌ಲೈಸೇಶನ್ ಪಾಲಿಸಿಯಲ್ಲಿ

ಇವೊತ್ತು ಡಿಕ್ಟೇಟರ್ ಆಗಿದ್ದಾರೆ. ವರ್ಲ್ಡ್ ಪೋಲೀಸ್ ಇವೊತ್ತು ಅಮೇರಿಕಾದವರು ಆಗಿರುವಂತೆ ಇದ್ದಾರೆ. ಅದೇ ರೀತಿಯಲ್ಲಿ ಆರ್ಥಿಕ ಹಿಡಿತವನ್ನು ಅವರ ಕೈಯಲ್ಲಿ ಇಟ್ಟುಕೊಂಡು ಎಲ್ಲಾ ದೇಶಗಳನ್ನು ಪುನಃ ಗುಲಾಮಗಿರಿಯ ಹಂತದಲ್ಲಿ ಒಯ್ಯುತ್ತಾರೆ ಎಂಬ ಎಚ್ಚರಿಕೆಯ ಮಾತುಗಳನ್ನು ನಾನು ಹೇಳಬೇಕಾಗುತ್ತದೆ. ಅವರು ನಮ್ಮನ್ನು ಒಂದು ಪರಿಸ್ಥಿತಿಗೆ ಒಳಮಾಡಿಕೊಂಡು ನಾವು ಏನು ಮಾಡಿದರೂ ಪ್ರತಿರೋಧ ಮಾಡದ ರೀತಿಯಲ್ಲಿ ನಮ್ಮನ್ನು ಕುಗ್ಗಿಸಿಬಿಡುತ್ತಾರೆ. ನಾವು ಅವರಿಗೆ ತಿರುಗಿ ಬೀಳುವ ಶಕ್ತಿಯನ್ನು ನಮ್ಮಿಂದ ಕಿತ್ತುಕೊಳ್ಳುತ್ತಾರೆ. ಕೃಷ್ಣಿ ಕ್ಷೇತ್ರದಲ್ಲಿ ನಮ್ಮ ದೇಶದಲ್ಲಿ ನಮ್ಮ ಕಾಲ ಮೇಲೆ ನಿಂತುಕೊಳ್ಳತಕ್ಕಂಥ ಶಕ್ತಿಯು ನಮ್ಮಲ್ಲಿದೆ. ಎರಡು ಹೊತ್ತಿನ ಊಟವನ್ನು ನಮ್ಮ ಜನರು ಮಾಡುವ ಸಾಮರ್ಥ್ಯವನ್ನು ನಾವು ಗಳಿಸಿಕೊಂಡಿದ್ದೇವೆ. ಎನ್ನತಕ್ಕ ದೃಷ್ಟಿಯಿಂದ ಬದುಕಿದ್ದೇವೆ. ಇಲ್ಲದಿದ್ದರೆ ನಾವು ಬದುಕುವ ಸಾಧ್ಯತೆ ಇರಲಿಲ್ಲ. ಆದ್ದರಿಂದ ನಿಮ್ಮ ನೀತಿಯೇನು? ಕೇಂದ್ರದ ಮೇಲೆ ಯಾವರೀತಿ ಒತ್ತಾಯ ತರಬೇಕೆಂದಿರುವಿರಿ? ಮತ್ತು ಇಷ್ಟೊಂದು ಐಟಂಗಳು ಏಕಕಾಲದಲ್ಲೇ ಎಕ್ಸಿಮ್ ಪಾಲಿಸಿಯೊಳಗೆ ಬರುವುದರಿಂದ ಏನು ಅನಾಹುತವಾಗುವುದು, ಅದನ್ನು ನಿಲ್ಲಿಸಲು ನಿಮ್ಮ ಪ್ರಯತ್ನಗಳೇನೆಂದು ಹೇಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ನಾವೇನು ಇವತ್ತು ಚರ್ಚೆ ಮಾಡುತ್ತಿದ್ದೇವೆ ಇದಕ್ಕೆ ಸ್ವಲ್ಪ ಮೂಲ ಹುಡುಕಬೇಕಾಗಿದೆ. ಪುಟ್ಟಣ್ಣಯ್ಯನವರು ಇದನ್ನು ಸ್ಪಷ್ಟಮಾಡಿದ್ದಾರೆ. ಹಿಂದೆ ಕಾಂಗ್ರೆಸ್‌ನ ಪಿ.ವಿ. ನರಸಿಂಹರಾಯರು ಇರುವ ಸಂದರ್ಭದಲ್ಲಿ ಈ ಗ್ಯಾಟ್ ಒಪ್ಪಂದವಾಯಿತು. ಅದರ ನಂತರ ಮಾನ್ಯ ದೇವೇಗೌಡರು ಪ್ರಧಾನಿಗಳಾಗಿದ್ದಾಗ ಹಾಗೇ ಮುಂದುವರೆದಿತ್ತು. ಇದರಲ್ಲಿ ಇಡೀ ದೇಶ ಜೇಡರಬಲೆಯಲ್ಲಿ ಸಿಕ್ಕಕೊಂಡಂತೆ ಸಿಕ್ಕಿಬಿದ್ದಿದೆ. ಇದರ ಬಗ್ಗೆ ಸರ್ಕಾರ ಏನು ಮಾಡಬೇಕು ಅದನ್ನು ಅವರು ಹೇಳಲಿ. ನಮ್ಮದೇ ಹಗ್ಗ ಕೊಟ್ಟು ನಮ್ಮದೇ ಕೈಕೊಟ್ಟು ಸಿಕ್ಕಿಕೊಂಡಾಗಿದೆ. ನಾವೆಲ್ಲ ಸೇರಿ ಇಡೀ ದೇಶದಲ್ಲಿ ಗ್ಯಾಟ್ ಒಪ್ಪಂದ ಬೇಡವಾಗಿತ್ತು ಎಂದು ಪ್ರತಿಭಟನೆ ಮಾಡಿದೆವು. ಕೊತ್ತಂಬರಿಸೊಪ್ಪಿನಿಂದ ಹಿಡಿದು ಬದನೆಕಾಯಿ ಎಲ್ಲವನ್ನೂ ವಿದೇಶದಿಂದ ತರಿಸುವ ಸ್ಥಿತಿ ಬಂದುಬಿಟ್ಟಿದೆ. ಮತ್ತೊಂದು ಸಲ ಪರತಂತ್ರದ ಗುಲಾಮಗಿರಿಗೆ ಸಿಕ್ಕಿಕೊಂಡಂತಾಗಿದೆ ಆ ಗ್ಯಾಟ್ ಒಪ್ಪಂದದ ದೆಸೆಯಿಂದ. ಆದ್ದರಿಂದ ಇದಕ್ಕೆ ಪರಿಹಾರ ಹುಡುಕುವ ದೆಸೆಯಲ್ಲಿ ಹಿರಿಯರು, ಅನೇಕ ವರ್ಷಗಳಿಂದ ಅನುಭವ ಪಡೆದಿರುವ ಮೊಯ್ಲಿ, ಖರ್ಗೆ ಮುಂತಾದವರು ಇಂಥದ್ದು ಪರಿಹಾರ ಎಂದು ಇಟ್ಟರೆ ಆಗೇನಾದರೂ ಮಾಡಬಹುದೇ ವಿನಃ ಆಗ ಆದ ತಪ್ಪು ಈಗಿನ ಸರ್ಕಾರ ಮಾಡುತ್ತಿರುವ ಪದ್ಧತಿ-ಇದರ ಬಗ್ಗೆ ಮಾತ್ರ ಮಾತನಾಡಿದರೆ ಆಗುವುದಿಲ್ಲವೆನಿಸುತ್ತದೆ.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷರೇ ಈ ತಿಂಗಳ ಒಂದನೇ ತಾರೀಖಿನ ಪತ್ರಿಕೆಗಳನ್ನು ಓದಿ ನಾನೊಬ್ಬ ರೈತನಾಗಿ ನಡುಗಿಹೋದೆ. ಶೇಕಡ 68ರಷ್ಟು ಜನ ಈ ದೇಶದಲ್ಲಿ ಭೂಮಿಯನ್ನು ನಂಬಿದ್ದಾರೆ. ಇಷ್ಟೊಂದು ಅಪಾರ ಜನಸಂಖ್ಯೆ ಗತಿ ಏನಾಗುತ್ತದೆ? ನಮ್ಮ ಕಡೆ ಹೇಳುತ್ತಾರೆ, ಭಿಕ್ಷೆ ಬೇಡುವವನನ್ನು ಚಿಪ್ಪುಹಿಡಿದವನು ಅಂತ, ಅಂತಹ ಚಿಪ್ಪು ನಮ್ಮ ರೈತರ ಕೈಗೆ ಕೊಡುವಂತಹ ಸ್ಥಿತಿ ದೇಶದಲ್ಲಿ ಉಂಟಾಗಿದೆ ಎಂದು ಓದಿ ನಾನಂತೂ ನಡುಗಿಹೋದೆ. ತಕ್ಷಣ ಆರ್ಥಿಕ ತಜ್ಞರೂ ಯೋಜನಾ ಮಂಡಲಿಯ ಉಪಾಧ್ಯಕ್ಷರೂ ಆದ ಶ್ರೀ ನಂಜುಂಡಪ್ಪನವರ ಸಂಪರ್ಕ ಬೆಳೆಸಿದಾಗ ಅವರು ಆಶ್ಚರ್ಯಪಟ್ಟರು;

ಇದೇನು ಈ ರೀತಿ ಆಗಿದೆಯಲ್ಲ ಎಂದು. ಜೊತೆಗೆ ನಮ್ಮ ಅಧಿಕಾರಿಗಳ ಸಲಹೆಯನ್ನೂ ಪಡೆದು ಮಾನ್ಯ ಈಶ್ವರಪ್ಪನವರು ಹೇಳಿದಂತೆ ಆರ್ಥಿಕ ತಜ್ಞರ, ಕೃಷಿ ತಜ್ಞ ವಿಜ್ಞಾನಿಗಳ ಮತ್ತು ದೇಶದ ಮುಂದಿನದರ ಬಗ್ಗೆ ಚಿಂತಿಸುವ ಚಿಂತಕರ ತಕ್ಷಣದಲ್ಲೇ ಒಂದು ದಿವಸ ಸಮಾವೇಶ ಕರೆದು ಎಲ್ಲರ ಅಭಿಪ್ರಾಯ ಪಡೆದು ಒಂದು ದೃಢ ನಿಲುವು ತೆಗೆದುಕೊಳ್ಳಬೇಕೆಂಬ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ. ಇನ್ನು 8-10 ದಿವಸದಲ್ಲೇ ಆ ಸಮಾವೇಶ ನಡೆಸಿ ರಾಜ್ಯದಲ್ಲಷ್ಟೇ ಅಲ್ಲ ಇಡೀ ದೇಶದೊಳಗೆ ಆಗುತ್ತಿರುವ ಅನಾಹುತವನ್ನು ತಪ್ಪಿಸಲು, ಆ ಪ್ರಯತ್ನ ಕರ್ನಾಟಕದಿಂದ ಪ್ರಾರಂಭವಾಗಬೇಕೆಂದು ಆಲೋಚನೆಯೂ ಇದೆ. ಆ ಸಮಾರಂಭಕ್ಕೆ ತಮಗೂ ಆಹ್ವಾನ ನೀಡುತ್ತೇನೆ, ತಾವೆಲ್ಲರೂ ಬರಬೇಕೆಂದು ಆಹ್ವಾನ ನೀಡುತ್ತಿದ್ದೇನೆ. ಇದು ಎಂತಹ ಅಂಚಿಗೆ ಹೋಗಿದೆ ಅಂದರೆ ನಮ್ಮ ರಾಜ್ಯದಲ್ಲಿ ಸಿರಾದಲ್ಲಿ ಶೇಂಗಾಬೆಲೆ ಕುಸಿದಿದ್ದರಿಂದ ಏನು ಅನಾಹುತವಾಯಿತೆಂದು ಎಲ್ಲರಿಗೂ ಗೊತ್ತು. ಆದರೆ, ಶೇಂಗಾವನ್ನು ಇವತ್ತು ಪರದೇಶದಿಂದ ತರಿಸುತ್ತಿದ್ದೇವೆ. ಮೆಣಸಿನಕಾಯಿ ಹೊರಗಡೆಯಿಂದ ತರಿಸುತ್ತಿದ್ದೇವೆ. ಇಲ್ಲಿ ಓದಿದರೆ ನನಗಂತೂ ಹೊಟ್ಟೆಯೊಳಗೆ ಬೆಂಕಿಬೀಳುತ್ತದೆ. ಇಂತಹ ಬೇಗೆ ಇಡೀ ದೇಶದ ರೈತರೆಲ್ಲರಲ್ಲೂ ಉಂಟಾಗಿರುತ್ತದೆ ಎಂದು ನಂಬಿಕೊಂಡಿದ್ದೇನೆ. ಮುಕ್ತ ಆಮದು ಪರವಾನಿಗಿ ಪಟ್ಟಿಯಲ್ಲಿ ಸೇರಿರುವ 894 ವಸ್ತುಗಳಲ್ಲಿ ಮುಖ್ಯವಾಗಿ ಡೈರಿ ಮತ್ತು ಕೃಷಿ ಉತ್ಪಾದನೆಗೆ ಸೇರಿದವುಗಳಾಗಿವೆ. ಅವುಗಳಲ್ಲಿ ಮುಖ್ಯವಾಗಿ ಹಾಲು, ಬೆಣ್ಣೆ, ಯೋಗಾರ್ಟ್, ಚೀಸ್, ನೈಸರ್ಗಿಕ ಜೇನು, ಟಮೊಟೊ - ಬೀದಿಯಲ್ಲಿ ಟಮೊಟೊ ಬೆಳೆದ ರೈತರು ಬಿಸಾಕುತ್ತಿದ್ದಾರೆ, ಅಂಥಾದ್ದನ್ನೂ ಹೊರದೇಶದಿಂದ ತರಿಸುವ ಅವಿವೇಕದ ಕೆಲಸ ಈ ದೇಶದಲ್ಲಿ ನಡೆಯುತ್ತಿದೆ. ನಾವು ಯಾರೂ ಕೋಸು ಬೆಳೆಯುವ ಹಾಗೇ ಇಲ್ಲ. ಕ್ಯಾರೆಟ್, ಬೀನ್ಸ್, ಆಣಬೆ ಬೆಳೆಯುವ ಹಾಗಿಲ್ಲ. ಬೇಳೆಕಾಳುಗಳು, ಮೆಣಸಿನಕಾಯಿ, ಬಾಳೆಹಣ್ಣು, ನಂಜನಗೂಡಿನ ರಸಬಾಳೆ ಮುಗಿದಿದೆ ಉಳಿದ ಪಚ್ಚಬಾಳೆ ಮತ್ತಿತರ ಜಾತಿಯೆಲ್ಲ ಮುಕ್ತಾಯವಾಗುತ್ತದೆ. ಮಾವು, ನಿಂಬೆಹಣ್ಣು, ಸ್ಟ್ರಾಬೆರಿ, ಪಪ್ಪಾಯಿ, ಮ್ಯಾಂಗೊಪಲ್ಪ್, ಕಪ್ಪುಮೆಣಸು ಅದೂ ಮುಕ್ತಾಯವಾಯಿತು, ನೀವು ಬೆಳೆಯುವ ಏಲಕ್ಕಿ, ಸೋಯಾಬಿನ್, ಇದೊಂದು ಎಣ್ಣೆಯ ಬೀಜ, ಇದರ ಮೇಲೆ 68ರಷ್ಟು ಶುಲ್ಕ ಏರಿಸಲಾಗಿತ್ತು. ಅದನ್ನು ಒಂದು ಕಾಲದಲ್ಲಿ 40ಕ್ಕೆ ಇಳಿಸಿ ಈಗ 20ಕ್ಕೆ ಬಂದು 16ಕ್ಕೆ ಇಳಿದಿದೆ. ನಮ್ಮ ದೇಶದ ಸೋಯಾಬಿನ್ ಬೆಳೆಗಾರರ ಗತಿ ಏನಾಗಬೇಕು ? ಸೋಯಾಬೀನ್ ಜೊತೆಗೆ ಪರದೇಶದಿಂದ ತಾಳೆ ಎಣ್ಣೆಯನ್ನೂ ತರಿಸುತ್ತಿದ್ದಾರೆ. ಇದರಿಂದ ನಮ್ಮ ಎಣ್ಣೆಬೆಲೆ ಕುಸಿದು ರೈತರು ನಿರ್ನಾಮವಾಗುತ್ತಿದ್ದಾರೆ.

ಛೇರ್ಮನ್ : ಎಲ್ಲ ಇದೆ ಯಾವುದೂ ಬಿಟ್ಟಿಲ್ಲ ಅಂದರೆ ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗೆ ಒಂದು ವಿಷಯ ತಿಳಿಯಬೇಕಾಗಿದೆ. 894 ಐಟಂಗಳಲ್ಲಿ 200 ಐಟಂಗಳು ಕೃಷಿಯದು ಇವೆ ಎಂದು ಇಟ್ಟುಕೊಳ್ಳೋಣ, ಗ್ಯಾಟ್ ಒಪ್ಪಂದ ಮಾಡುವಾಗ ಸೆಲೆಕ್ಟೀವ್ ಆಗಿ ಮಾಡಬಹುದಾಗಿತ್ತೋ ಅಥವಾ ಸಾರಾಸಗಟಾಗಿ ಮಾಡಬೇಕಾಗಿತ್ತೋ? ಏನೋ ಹತ್ತೋ ಹದಿನೈದೋ ಸೆಲೆಕ್ಟೀವ್ ಐಟಂಗಳಿಗೆ ಕೊಡಬಹುದಾಗಿತ್ತು, ಅದು ಬಿಟ್ಟು ನೂರು ಐಟಂಗಳನ್ನು ಸೂಮೊಟೊ ಬರೆದುಕೊಡಬೇಕಾಗಿತ್ತೇ? ಏಕೆಂದರೆ ಕೇಂದ್ರ ಸರ್ಕಾರಕ್ಕೆ ನಾವು ಒತ್ತಾಯ ಮಾಡುವಾಗ ಇಂತಿಂಥ ಐಟಂಗಳು ನಮ್ಮಲ್ಲೇ ಬೆಳೆಯಲಾಗುತ್ತಿದೆ ಇವುಗಳನ್ನು ಆಮದು ಮಾಡಿಕೊಂಡರೆ

ತೊಂದರೆಯಾಗುತ್ತದೆ ಎಂದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಈಗ ಲಿಬರಲೈಜೇಶನ್, ಗ್ಲೋಬಲೈಜೇಶನ್, ಗ್ಯಾಟ್, ಐಎಂಎಫ್, ಡಬ್ಲ್ಯುಟಿಓ, ಪೇಟೆಂಟು-ಏನೂ ಗೊತ್ತಿಲ್ಲ ನಮ್ಮ ರೈತರಿಗೆ. ನಾವಿಲ್ಲಿ ಮಾತನಾಡುತ್ತಿದ್ದೇವೆ ಅಷ್ಟೇ. ಡಬ್ಲ್ಯುಟಿಓಗೆ ಒಂದು ಸೈನ್ ಹಾಕಿ ಮುಕ್ತ ಪರವಾನಗಿಗೆ ಒಪ್ಪಿಗೆ ಕೊಟ್ಟ ತಕ್ಷಣವೇ ಈಗ ಸಕ್ಕರೆಯಲ್ಲಿ ಇಡೀ ಪ್ರಪಂಚಕ್ಕೆ ಮೊದಲನೆಯವರು ಇದ್ದೇವೆ. ಮತ್ತೆ ಸಕ್ಕರೆಯನ್ನು ತರಿಸಿಕೊಳ್ಳುತ್ತಿದ್ದೇವೆ. ಹಾಲು ಉತ್ಪಾದನೆಯಲ್ಲಿ ನಾವೇ ಮೊದಲನೆಯವರು ಮತ್ತು ಡೈರಿ ಐಟಂಸ್‌ನ್ನು ತರಿಸಿಕೊಳ್ಳುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಪುಟ್ಟಣ್ಣಯ್ಯನವರೇ, ಅದಕ್ಕಿಂತ ದುರಂತ ಎಂದರೆ.....

(ಗೊಂದಲ)

ಛೇರ್ಮನ್ : ಒಂದು ನಿಮಿಷ ಅವಕಾಶಕೊಡಿ. ಇನ್ನು ಸುಮಾರು 9 ಜನರು ಮಾತನಾಡುವವರು ಇದ್ದಾರೆ. ಅವರು ಮಾತನಾಡುವುದಕ್ಕೆ ಅವಕಾಶ ಸಿಗದೇ ಹೋದರೆ ಅವರು ತಪ್ಪು ತಿಳಿದುಕೊಳ್ಳಬಾರದು. ಏಕೆಂದರೆ ಇವತ್ತು ಕೊನೆಯ ದಿವಸ ಇದೆ. ತಾವು ಮಾತನಾಡುವವರು ವಿಷಯ ಅಲ್ಲಿಗೆ ಬಂದರೆ ಸಾಕು. ವಿಷಯಾಂತರವಾಗಬಾರದು. ಬೇರೆಯವರಿಗೂ ಅವಕಾಶ ಕೊಡಿ. ಇನ್ನು ಹಷ್ಮಿಯವರು ಇದ್ದಾರೆ. ವೈಜನಾಥ ಪಾಟೀಲ್‌ರವರು ಇದ್ದಾರೆ. ಎ.ಟಿ. ರಾಮಸ್ವಾಮಿಯವರು ಇದ್ದಾರೆ. ಬಹಳ ದಿವಸಗಳಿಂದ ಅವರುಗಳು ಕಾಯುತ್ತಿದ್ದಾರೆ. ಇಡೀ ದೇಶದ ಪರಿಸ್ಥಿತಿಯನ್ನು ನೀವು ವಿವರಿಸಿದಿರಿ. ಏನೇನಾಗಿದೆ ಎಂದು. ಏನು ಮಾಡಬೇಕು ಎನ್ನುವುದರ ಬಗ್ಗೆ ತಾವೇನಾದರೂ ಹೇಳುವ ಹಾಗೆ ಇದ್ದರೆ ಹೇಳಿ.

(ಗೊಂದಲ)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಡಬ್ಲ್ಯೂ.ಟಿ.ಓ. ಉದ್ದೇಶ ಎಲ್ಲಾ ಪದಾರ್ಥಗಳು ವಿದೇಶದಿಂದ ಮಾರುಕಟ್ಟೆಗೆ ಪ್ರವೇಶ ಮಾಡಿ ಇಡೀ ರೈತರು ಕೃಷಿಯಿಂದ ನಿರ್ಲಿಪ್ತವಾಗಿ ಮಾಡಿ ಇಡೀ ಮಾರುಕಟ್ಟೆಯನ್ನು ಆಕ್ಯುಪೈ ಮಾಡಿ ಇಡೀ ದೇಶಕ್ಕೆ 1 ರಿಂದ 10 ರಷ್ಟು ದುಬಾರಿಗೆ ಮಾರುವ ಆಲೋಚನೆ. ತಮ್ಮ ಮಾರುಕಟ್ಟೆ ಕ್ರಿಯೇಟ್ ಮಾಡಿಕೊಳ್ಳುವುದಕ್ಕೆ ಈ ಡಬ್ಲ್ಯೂ.ಟಿ.ಓ. ಒಪ್ಪಂದವಾಗಿರುವುದು ಅಷ್ಟೇನೆ. ಇಲ್ಲಿ ಹೇಳುತ್ತಾರೆ. ವಿಶ್ವ ರಾಷ್ಟ್ರ ಸಂಸ್ಥೆಯನ್ನೇ ಖಾಸಗೀಕರಣವಾಗುವ ಪರಿಸ್ಥಿತಿ ಇದೆ ಎಂದರೆ ಅಮೇರಿಕಾದವರು ಇಡೀ ಆ ದೇಶದ ಪ್ರಪಂಚದ ಆಹಾರ ಉತ್ಪಾದನೆಯನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ಎಲ್ಲರನ್ನೂ ಗೊಂಬೆಯಾಟ ಆಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಛೇರ್ಮನ್ : ಅದನ್ನು ಹೇಳಿದಿರಿ. ಮತ್ತೆ ಏನು ಮಾಡಬೇಕು ಎಂದು ಯಾರು ಹೇಳಲಿಲ್ಲವಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅದಕ್ಕೆ ರಾಜ್ಯಸರ್ಕಾರದ ಜವಾಬ್ದಾರಿ ಏನು?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ್ದೇನೆ. ಈ ಆರ್ಥಿಕ ತಜ್ಞರನ್ನು, ಕೃಷಿ ತಜ್ಞರನ್ನು ಎಲ್ಲರನ್ನೂ ಕೂಡ ಕರೆದು, ಏಕೆಂದರೆ ಇಡೀ ದೇಶದಲ್ಲಿರುವ ಪರಿಸ್ಥಿತಿಯನ್ನು ನಾವು ಅಧ್ಯಯನ ಮಾಡಬೇಕಾಗುತ್ತದೆ. ಮತ್ತು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇದರ ಪರಿಣಾಮ ಕೂಡ ಏನಾಗುತ್ತದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಈ ಉದ್ದೇಶದಿಂದಲೇ ನಾವು ಒಂದು

ದಿವಸದ ಒಂದು ವಿಚಾರ ವಿನಿಮಯವನ್ನು ಏರ್ಪಾಡು ಮಾಡಿರತಕ್ಕಂಥದ್ದು. ಅದಾದನಂತರ ಈ ಸದನದ ಮಾನ್ಯ ಸದಸ್ಯರುಗಳ ಅಭಿಪ್ರಾಯದಲ್ಲಿ ಕೇಂದ್ರ ಸರ್ಕಾರಕ್ಕೆ ಎಲ್ಲಾ ಪಕ್ಷದ ಒಂದು ನಿಯೋಗವನ್ನು ಕೂಡ ಕರೆದುಕೊಂಡು ಹೋಗುವುದಕ್ಕೆ ನಾವಂತೂ ತಯಾರಿದ್ದೇವೆ. ಇದಕ್ಕಿಂತ ಮುಖ್ಯವಾದ ಕೆಲಸ ನಾವು ಮಾಡಬೇಕಾಗಿರುವುದು ಏನೂ ಇಲ್ಲ ಎನ್ನುವ ಭಾವನೆ ನನ್ನದು. ಎಲ್ಲರಲ್ಲೂ ಕೂಡ. ಎಲ್ಲಾ ಪಕ್ಷದ ನಿಯೋಗವನ್ನು ಕರೆದುಕೊಂಡು ಹೋಗಿ ಸಂಬಂಧಪಟ್ಟ ಮಾನ್ಯ ಮಂತ್ರಿಗಳನ್ನಲ್ಲದೆ ಪ್ರಧಾನಮಂತ್ರಿಗಳನ್ನೂ ಕೂಡ ಭೇಟಿಯಾಗಿ ಅವರಿಗೂ ಕೂಡ ಈ ವಿಚಾರವನ್ನು ತಿಳಿಸುವುದಕ್ಕೆ ಸರ್ಕಾರವಂತೂ ಸಿದ್ಧವಾಗಿದೆ. ಇಲ್ಲದೆ ಇದ್ದರೆ ಈ ದೇಶದ ವ್ಯವಸಾಯ ಕುಸಿಯುತ್ತದೆ, ಹಾಳಾಗುತ್ತದೆ. ಸ್ವಾತಂತ್ರ್ಯಕ್ಕಿಂತ ಮೊದಲು ನಮ್ಮ ಕೃಷಿ ಬೆಳವಣಿಗೆ ಎಷ್ಟಿತ್ತು ಎಂದರೆ ಶೇಕಡ 0.3 ರಷ್ಟು ಮಾತ್ರ ಇತ್ತು. ಇವತ್ತು ಶೇಕಡ 3 ಅಥವಾ 4 ರಷ್ಟು 5 ರಷ್ಟು ಕೂಡ ಬೆಳೆಯುವ ಪರಿಸ್ಥಿತಿಯಲ್ಲಿ ಪುನಃ ವಾಪಸ್ ಗಡಿಯಾರವನ್ನು ತಿರುಗಿಸತಕ್ಕಂಥ ಇವತ್ತು ನಡೆಯುತ್ತಿದೆ. ಈ ಪ್ರಯತ್ನವನ್ನೇ ಮುಂದುವರಿಸುವುದಕ್ಕೆ ಅವಕಾಶವಿಲ್ಲ, ಮುಂದುವರಿಸಿದರೆ ಈ ದೇಶ ಹಾಳಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಮಾನ್ಯ ವಿರೋಧಪಕ್ಷದ ನಾಯಕರು, ಈಶ್ವರಪ್ಪನವರು ಮತ್ತೆ ಪುಟ್ಟಣ್ಣಯ್ಯನವರು ಎಲ್ಲರೂ ಈ ವಿಚಾರಗಳನ್ನೆ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೆಗಡೆಯವರು ಇಲ್ಲೇ ಬರುತ್ತಾರಲ್ಲ, ನಾವು ಇಲ್ಲಿಂದ ಏಕೆ ಹೋಗಬೇಕು?

ಶ್ರೀ ಸಿ. ಭೈರೇಗೌಡ : ಎಲ್ಲರೂ ಹೋಗೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೇಳಿ ಅವರಿಗೆ ಅವರೇನು ಈಗ ಒಂದು ಕಾರಣವನ್ನು ಕೊಟ್ಟಿದ್ದಾರೆ, 15 ರಿಂದ 20 ಪರ್ಸೆಂಟ್ ಎಕ್ಸ್‌ಪೋರ್ಟ್ ಮಾಡುವುದನ್ನು ಅಪೇಕ್ಷೆ ಮಾಡಿದ್ದೆ. ಅದನ್ನು 0.14 ಆಗಿದೆ. ಅದಕ್ಕೆ ಎಲ್ಲಾ ಐಟಂಗಳು ಹೋಗಲಿ ಎಂದು ಹೇಳಿ ಈ ಐಟಂಗಳು ಬಂದಿವೆ. ರಾಜ್ಯಸರ್ಕಾರಕ್ಕೆ ತಮಗೆ ಗೊತ್ತಿರುವ ಹಾಗೆ ಕೆಲವು ಸಬ್ಜೆಕ್ಟ್‌ಗಳು ಎಕ್ಸ್‌ಕ್ಲೂಸೀವ್ ಆಗಿವೆ. ಎಜುಕೇಷನ್ ಆಗಲಿ, ಕೃಷಿಯಾಗಲಿ, ತೋಟಗಾರಿಕೆಯಾಗಲಿ, ನಮ್ಮ ಸಬ್ಜೆಕ್ಟ್‌ನ್ನು ನಮಗೆ ಸಂಬಂಧಪಟ್ಟಂಥ ವಿಷಯಕ್ಕೆ ನೇರವಾಗಿ ನಿರ್ಣಯ ತೆಗೆದುಕೊಂಡು ಇದರ ಮೇಲೆ ಈ ರೀತಿಯಾದ ಪಾಲಿಸಿಯನ್ನು ಡಿಕ್ಲೇರ್ ಮಾಡುವುದಕ್ಕೆ ಅವರಿಗೆ ಸಂಪೂರ್ಣವಾದ ಹತೋಟಿ ಇದೆಯೇ ಇಲ್ಲವೇ? ಅದನ್ನು ಕೂಡ ನಾವು ಯೋಚನೆ ಮಾಡಬೇಕು. ಏಕೆಂದರೆ ಇದು ರಾಜ್ಯ ಸರ್ಕಾರದ ವಿಷಯ. ಸ್ಟೇಟ್ ಸಬ್ಜೆಕ್ಟ್ ಬಗ್ಗೆಯೇ ಎಕ್ಸ್‌ಕ್ಲೂಸೀವ್ ಆಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಶೂನ್ಯ ವೇಳೆಯಲ್ಲಿ ಅಲ್ಪಕಾಲಾವಧಿ ಚರ್ಚೆ ರೀತಿ ನಡೆಯುತ್ತಿದೆ. ನಾವು ಇನ್ನು 9 ಜನರು ಮಾತನಾಡುವವರು ಇದ್ದೇವೆ. ಚರ್ಚೆ ರೀತಿ ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಶೂನ್ಯವೇಳೆಗೆ ಒಂದು ಸ್ಯಾಂಕ್ಟಿಟಿ ಇದೆ.

ಛೇರ್ಮನ್ : ಮಾನ್ಯ ಬಸವರಾಜುರವರೇ, ದಯಮಾಡಿ ಕುಳಿತುಕೊಳ್ಳಿ. ಅದನ್ನೇ ನಾನು

ಹೇಳುತ್ತಿದ್ದೇನೆ. ಈಗ ನಾನು ಹೇಳುವುದು ಕೇಳಿ. ಈಗ ಇಲ್ಲಿ ಕುಳಿತಿರತಕ್ಕಂಥವರು ಸನ್ಮಾನ್ಯ ಮಂತ್ರಿಗಳಲ್ಲ ನಾನು ಅರಿಕೆ ಮಾಡಿಕೊಳ್ಳುವುದು ಇಲ್ಲಿ ಕುಳಿತಿರತಕ್ಕಂಥವರು, ಅವರ ಸಬ್ಜೆಕ್ಟ್‌ಗಳು ಇವೆ. ಮತ್ತೆ ಸಬ್ಜೆಕ್ಟ್ ಆದಂತೆ ಶಾಸಕರುಗಳು ಎದ್ದು ಹೋಗುತ್ತಿದ್ದಾರೆ. ಮಂತ್ರಿಗಳು ಇಲ್ಲಿ ಇರಬೇಕೆಂದು ಹೇಳಿ ಚೀಟಿ ಕಳುಹಿಸುತ್ತಿದ್ದಾರೆ. ಅಂದಮೇಲೆ ಯಾರು ಮಾತನಾಡುತ್ತಾರೆ. ಅವರು ಕೂಡ ಎದ್ದು ಹೋಗಬಾರದು. ಸದನ ಮುಗಿಯುವವರೆಗೂ ಇಲ್ಲೇ ಇರಬೇಕು. ಮಾತನಾಡಿ ಮಾತನಾಡಿ ಎದ್ದು ಹೋದರೆ ಇಲ್ಲಿ ಯಾರ ಹತ್ತಿರ ಮಾತನಾಡುವುದು. ಯಾರಿಗೆ ಮಾತನಾಡುವುದು. ಅದರಿಂದ ಮಾತನಾಡತಕ್ಕಂಥವರು ಮಾತನಾಡಿ ಇಲ್ಲಿಯೇ ಕೂರಬೇಕು. ಯಾರೂ ಎದ್ದುಹೋಗಬಾರದು. ಮಂತ್ರಿಗಳು ಬೇಗ ತಮ್ಮ ಉತ್ತರವನ್ನು ಮುಗಿಸಿಬಿಡಿ.

ಶ್ರೀ ಪಿ. ಭೈರೇಗೌಡ : ಇದು ಸ್ವಾಗತವಾಗಿರುವ ವಿಚಾರವಾಗಿರುವುದರಿಂದ ಸರ್ವ ಪಕ್ಷದ ನಿಯೋಗವನ್ನು ಮಾನ್ಯ ಪ್ರಧಾನಮಂತ್ರಿಗಳ ಮಟ್ಟಿಗೆ ಮತ್ತು ವಾಣಿಜ್ಯ ಮಂತ್ರಿಗಳ ಹತ್ತಿರವೂ ಹೋಗಿ ಅವರಿಗೆ ಈ ವಿಚಾರವನ್ನು ಮನದಟ್ಟು ಮಾಡಿಕೊಡುವುದಕ್ಕೆ ಈ ರೀತಿಯಾಗಿ ಮುಕ್ತವಾಗಿ ಹೊರದೇಶದಿಂದ ತರಿಸುವುದಕ್ಕೆ ನಮ್ಮ ಸ್ಪಷ್ಟವಾದ ವಿರೋಧವನ್ನು ತೋರಿಸಬೇಕಾಗುತ್ತದೆ. ಆ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಸಹಾ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನೊಂದು ವಿಚಾರವನ್ನು ಮಾನ್ಯ ಪುಟ್ಟಣ್ಣಯ್ಯನವರು ತಿಳಿಸಿದ್ದಾರೆ. ಮಾನ್ಸಾಂಟೊ ನನಗೆ ಗೊತ್ತಿರುವ ಹಾಗೆ ಕೇಂದ್ರಸರ್ಕಾರದ ಪರವಾನಗಿ ಇಲ್ಲದೆ ಎಲ್ಲೂ ಕೂಡ ಏನು ಮಾಡುತ್ತಿಲ್ಲ. ಕೇಂದ್ರ ಸರ್ಕಾರದ ಪರವಾನಗಿಯನ್ನು ಮತ್ತು ರಾಜ್ಯಸರ್ಕಾರಕ್ಕೆ ಕೂಡ ಆ ಪರವಾನಗಿ ಬಗ್ಗೆ ತಿಳಿಸಿ ಅವರು ಕೆಲವು ಪ್ರಯೋಗಗಳನ್ನು ಮಾಡುತ್ತಿದ್ದಾರೆಯೇ ವಿನಹಾ ರಾಜ್ಯ ಸರ್ಕಾರವನ್ನು ಕೇಂದ್ರ ಸರ್ಕಾರವನ್ನು ಕತ್ತಲಲ್ಲಿ ಇಟ್ಟು ನನ್ನ ಮಾಹಿತಿ ಪ್ರಕಾರ ಯಾವ ಒಂದು ಪ್ರಯೋಗಗಳನ್ನು ಕೂಡ ಮಾಡುತ್ತಿಲ್ಲ ಎನ್ನುವುದನ್ನು ಮಾನ್ಯ ಪುಟ್ಟಣ್ಣಯ್ಯನವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

(ಎ) ಗೊರೂರಿನಲ್ಲಿರತಕ್ಕಂಥ ಹೇಮಾವತಿ ಜಲಾಶಯದ ಯೋಜನೆಯ ಗುತ್ತಿಗೆದಾರರಿಗೆ ಎಲ್.ಓ.ಸಿ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಗೊರೂರಿನಲ್ಲಿರತಕ್ಕಂಥ ಹೇಮಾವತಿ ಜಲಾಶಯದ ಯೋಜನೆಯ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಲ್ಲಿ ಯಾವುದೇ ನಿಯಮಗಳನ್ನು ಸರ್ಕಾರ ಮತ್ತು ನೀರಾವರಿ ಇಲಾಖೆ ಅನುಸರಿಸುತ್ತಿಲ್ಲ. ಮನಬಂದಂತೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುತ್ತಾ ಅವರು ಇದ್ದಾರೆ, ಇದರಿಂದ ಗುತ್ತಿಗೆದಾರರಿಗೆ ಬಹಳ ತೊಂದರೆಯಾಗಿದೆ ಎನ್ನುವ ವಿಷಯವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಈಗ ಸರ್ಕಾರ ಒಂದು ಸಾರಿ ಎಲ್.ಓ.ಸಿ. ಯನ್ನು ಕೊಟ್ಟಮೇಲೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲಿಕ್ಕೆ ನಿಯಮವನ್ನು, ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಆದರೆ ಈ ಇಲಾಖೆ ಗೊರೂರಿನಲ್ಲಿ ಕನಿಷ್ಟ ನಿಯಮ, ಗರಿಷ್ಠ ಬೇಡ. ಕನಿಷ್ಟ ನಿಯಮವನ್ನು ಕೂಡ ಅನುಸರಿಸುತ್ತಿಲ್ಲ. ಮೊನ್ನೆ 30-31 ನೇ ತಾರೀಖಿಗೆ ಬಿಲ್ ತಂದವರಿಗೆ ಹಣವನ್ನು ಪಾವತಿ ಮಾಡಿದ್ದಾರೆ. ಒಂದು ವರ್ಷದಿಂದ ಕೆಲಸ ಮಾಡಿ ಬಿಲ್ ಮಾಡಿಸಿಕೊಟ್ಟವರಿಗೆ ಹಣ ಪಾವತಿ ಮಾಡುತ್ತಿಲ್ಲ. ಹಣ ಕೊಟ್ಟವರಿಗೆ, ಚೀಟಿ